# ಹುನಗುಂದ ಪ್ರದೇಶದ ನಿರ್ಲಕ್ಷಿತ ಐತಿಹಾಸಿಕ ಸ್ಮಾರಕಗಳು

**ಶಿವಾನಂದ ಆರ್. ನಾಗಣ್ಣವರ**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ.

DOI: https://doi.org/10.5281/zenodo.17296786

## ABSTRACT:

ಹುನಗುಂದ ತಾಲೂಕು ಬಾಗಲಕೋಟೆ ಜಿಲ್ಲೆಯ ಒಂದು ಪ್ರಸಿದ್ಧ ಐತಿಹಾಸಿಕ ಕೇಂದ್ರ. ಬಸವೇಶ್ವರ ನಡೆದಾಡಿದ ಪುಣ್ಯಭೂಮಿ, ಕಲೆ ವಾಸ್ತುಶಿಲ್ಪದ ತೊಟ್ಟಿಲೆಂದು ಹೆಸರಾದ ಐಹೊಳೆಯ ತಾಯ್ನೆಲ. ತಾಲೂಕಿನಲ್ಲಿ ಹಳೆಯ ಶಿಲಾಯುಗದ ಕಾಲದಿಂದ ವಿಜಯನಗರ ಸಾಮ್ರಾಜ್ಯದವರೆಗಿನ ರಾಜಕೀಯ ಚರಿತ್ರೆಯನ್ನು ಹೊಂದಿದ ಪ್ರದೇಶವಾಗಿದೆ. ಈ ತಾಲೂಕಿನ ಪರಿಸರದ ಐಹೊಳೆ, ಸಿದ್ಧನಕೊಳ್ಳ ಪ್ರಮುಖ ಶಿಲಾಯುಗದ ನೆಲೆಗಳಾಗಿದ್ದರೆ, ಹುನಗುಂದ, ಅರಸಿಬೀದಿ, ಐಹೊಳೆ, ಸಿದ್ಧನಕೊಳ್ಳ, ಕರಡಿ, ಕಂದಗಲ್, ನಂದವಾಡಗಿ, ಕೂಡಲಸಂಗಮ, ಬಾದಾಮಿ ಚಾಲುಕ್ಯರ, ಯಾದವರ, ರಾಷ್ಟ್ರಕೂಟರ, ಕಲ್ಯಾಣದ ಚಾಲುಕ್ಯರ ಕಲೆಯ ಕೇಂದ್ರಗಳಾಗಿದ್ದು, ಆಕರ್ಷನೀಯ ದೇವಾಲಯಗಳನ್ನು, ಕೋಟೆಗಳನ್ನು ನಿರ್ಮಿಸಿದ್ದು ಅವುಗಳಲ್ಲಿ ಕೆಲವನ್ನು ಹೊರತುಪಡಿಸಿದರೆ ಬಹುಪಾಲು ಮಂದಿರಗಳು ನಿಧಿಗಳ್ಳರ ವಿಧ್ವಂಸಕ ಕೃತ್ಯಕ್ಕೆ ಬಲಿಯಾಗಿ ನಾಶವಾಗುತ್ತ ಸಾಗಿವೆ. ಅವುಗಳನ್ನು ರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂಬುದನ್ನು ಪರಿಚಯಿಸುವುದೇ ಈ ಲೇಖನದ ಮುಖ್ಯ ಉದ್ದೇಶ.

## KEYWORDS:

ಪೊನ್ನಗುಂದ, ಕಿಸುಕಾಡು, ಸೂಳೆಗುಡಿ, ಜಿನಾಲಯ, ನೆಲಗುಡಿ.

**ಪ್ರಸ್ತಾವನೆ**

ಬಾಗಲಕೋಟೆ ಜಿಲ್ಲೆಯ ತಾಲೂಕಾ ಕೇಂದ್ರವಾದ ಹುನಗುಂದ ಪ್ರಾಚೀನ ಕಾಲದಿಂದ ತನ್ನದೇ ಆದ ಶ್ರೀಮಂತ ಸಂಸ್ಕೃತಿಯನ್ನು ಹೊಂದಿದ ಪ್ರದೇಶವಾಗಿದೆ. ಆದಿ ಶಿಲಾಯುಗದಿಂದ ಆರಂಭವಾಗಿರುವ ಈ ತಾಲೂಕಿನ ಇತಿಹಾಸ ಅರಸೊತ್ತಿಗೆಯ ಕಾಲದಲ್ಲಿ ಬಾದಾಮಿ ಚಾಲುಕ್ಯರನ್ನು ಮೊದಲ್ಗೊಂಡು ವಸಾಹತುಶಾಹಿಗಳಾದ ಆಂಗ್ಲರ ಆಡಳಿತಕ್ಕೊಳಪಟ್ಟ ಪ್ರದೇಶವಾಗಿದೆ. ಬೆನಕನವಾರಿ, ಐಹೊಳೆ, ನಿಂಬಲಗುಂದಿ, ಹಳೇ ಕಡಿವಾಲ, ಹಿರೇಮಾಗಿ, ಚಿಕ್ಕಮಾಗಿ, ಬೂದಿಹಾಳ, ಶಿಲಾಯುಗದ ನೆಲೆಗಳಾಗಿವೆ. ಐಹೊಳೆ, ಸಿದ್ದನಕೊಳ್ಳ, ಮುಂತಾದೆಡೆಗಳಲ್ಲಿ ಮಧ್ಯ ಶಿಲಾಯುಗದ ಉಪಕರಣಗಳೂ ಪತ್ತೆಯಾಗಿವೆ. ಶಿವಶರಣರು ಬೆಳಗಿದ ಪ್ರದೇಶ. ಬಸವೇಶ್ವರರ ಅಧ್ಯಯನ ಹಾಗೂ ಐಕ್ಯಸ್ಥಳ ಕೂಡಲಸಂಗಮ ಈ ತಾಲೂಕಿನ ಧಾರ್ಮಿಕ ಚಿಂತನೆಗೆ ಸಾಕ್ಷಿ. ಶರಣ ಶಂಕರದಾಸಿಮಯ್ಯನಿಗೆ ಜನ್ಮ ನೀಡಿದ ಸ್ಥಳ ಕಂದಗಲ್ ಈ ತಾಲೂಕಿನ ಐತಿಹಾಸಿಕೆ ಕೇಂದ್ರ. ಜಗತ್ತಿನ ಜನರನ್ನು ಕಲೆಯ ಮೂಲಕ ತನ್ನತ್ತ ಸೆಳೆದುಕೊಳ್ಳುತ್ತಿರುವ ಭಾರತದ ವಾಸ್ತುಶಿಲ್ಪದ ತೊಟ್ಟಿಲೆಂದೇ ಪ್ರಸಿದ್ಧವಾಗಿರುವ ಚಾಲುಕ್ಯರ ಕಲೆಯ ಕೇಂದ್ರ ಐಹೊಳೆ ಇರುವ ತಾಲೂಕು. ಅದೆಷ್ಟೋ ಸ್ಮಾರಕಗಳು ಇಂದು ಶಿಥಿಲಗೊಂಡು ನಾಶವಾಗುತ್ತಿರುವುದು ಅತ್ಯಂತ ನೋವಿನ ಸಂಗತಿ. ಅಳಿಯುತ್ತಿರುವ, ನಿರ್ಲಕ್ಷಕ್ಕೊಳಗಾಗಿರುವ ತಾಲೂಕಿನ ಸ್ಮಾರಕಗಳನ್ನು ಪುನಃ ಜೀರ್ಣೋದ್ಧಾರಗೊಳಿಸಿ ಇತಿಹಾಸವನ್ನು ಉಳಿಸುವ ಕುರಿತು ನಾಡಿನ ಜನರು ಹಾಗೂ ಸರಕಾರಕ್ಕೆ ಮನವರಿಕೆ ಮಾಡಿಕೊಡುವುದೇ ಈ ಲೇಖನದ ಉದ್ದೇಶ.

**ಹುನಗುಂದದ ರಾಮಲಿಂಗೇಶ್ವರ ದೇವಾಲಯ**

ಶಾಸನಗಳಲ್ಲಿ ಪೊನ್ನಗುಂದವೆಂದೇ ಉಲ್ಲೇಖಿತವಾಗಿರುವ ಹುನಗುಂದವು ಕಲ್ಯಾಣ ಚಾಲುಕ್ಯರ ಒಂದು ಕಲೆಯ ಕೇಂದ್ರವಾಗಿದ್ದು, ಕಲ್ಯಾಣದ ಚಾಲುಕ್ಯರು ನಿರ್ಮಿಸಿದ ಒಂದು ಸುಂದರ ದೇವಾಲಯವೂ ಈ ನಗರದಲ್ಲಿದೆ. ಈ ದೇವಾಲಯವು ಹುನಗುಂದ ನಗರದ ಉತ್ತರದ ಗುಡ್ಡದ ಕೆಳಗೆ ಕೋಟೆಯ ಭಾಗದಲ್ಲಿ ನಿರ್ಮಿತವಾಗಿದೆ. ಈ ದೇವಾಲಯವು ದ್ವಾರಮಂಟಪ, ನವರಂಗಮಂಟಪ, ನಂದಿಮಂಟಪ ಮತ್ತು ಚಿಕ್ಕದಾದ ಗರ್ಭಗುಡಿ ಎಂಬ ಭಾಗಗಳನ್ನು ಒಳಗೊಂಡಿರುವುದು. ಗರ್ಭಗೃಹದ ದ್ವಾರಬಾಗಿಲವು ಸುಂದರವಾದ ದ್ವಾರಶಾಖೆಗಳನ್ನು ಹೊಂದಿದೆ. ಗರ್ಭಗೃಹದ ಮುಂಭಾಗದಲ್ಲಿ ಗಜಲಕ್ಷ್ಮಿಯನ್ನು ಮತ್ತು ಲಲಾಟದಲ್ಲಿ ವ್ಯಾಳಮುಖದ ದ್ರಾವಿಡ ಶಾಲಕೂಟವನ್ನೊಳಗೊಂಡ ಸ್ತೂಪಿಗಳಿಂದ ಅಲಂಕೃತವಾಗಿದೆ. ಈ ದೇವಾಲಯವು ಎರಡು ಅಂತಸ್ತನ್ನು ಹೊಂದಿದೆ. ಇಲ್ಲಿ ವಿಶಾಲವಾದ ಪ್ರಾಂಗಣವಿದ್ದು ನವರಂಗಮಂಟಪದಲ್ಲಿ ಚೌಕಾಕಾರದ 16 ಕಂಬಗಳಿವೆ. ಈ ಕಂಬಗಳು ಪರಶಿವನ ಲೀಲೆಗಳನ್ನು ತೋರ್ಪಡಿಸುವ ಸುಂದರವಾದ ಶಿಲ್ಪಗಳಿಂದ ಅಲಂಕೃತಗೊಂಡಿವೆ. ಈ ದೇವಾಲಯದ ಮತ್ತೊಂದು ವಿಶೇಷವಾದ ಲಕ್ಷಣವೆಂದರೆ ಗರ್ಭಗುಡಿಯು ನೆಲಮಟ್ಟಕ್ಕಿಂತ ಕೆಳಗಿದ್ದು, ಚಿಕ್ಕದಾಗಿದೆ. ಗರ್ಭಗುಡಿಯ ಎದುರಿಗೆ ಭೂಮಿಯ ಮಟ್ಟಕ್ಕೆ ಸಮಾನಾಂತರದಲ್ಲಿ ನಂದಿಮಂಟಪವು ಇದೆ. ನಂದಿಮಂಟಪದ ಮೇಲ್ಛಾವಣಿಯಲ್ಲಿ ನಂದಿಯನ್ನೇರಿ ಕುಳಿತಿರುವ ಶಿವ ಪಾರ್ವತಿಯರ ಉಬ್ಬು ಶಿಲ್ಪವಿರುವುದು. ನಂದಿಯ ಹಿಂಭಾಗದಲ್ಲಿ ಶಿವನ ಕಡೆಗೆ ಮುಖಮಾಡಿ, ಸುಖಾಸನದಲ್ಲಿ ಕುಳಿತಿರುವ ಪಾರ್ವತಿಯ ಶಿಲ್ಪವು ಕಾಣುವುದು. ಪಾರ್ವತಿಯು ತನ್ನ ಎಡಗೈಯಲ್ಲಿ ಪದ್ಮವನ್ನು ಹಿಡಿದುಕೊಂಡಿರುವ ಶಿಲ್ಪ ನಯನ ಮನೋಹರವಾಗಿದೆ. ಅದರಂತೆ ಚತುರ್ಭುಜನಾದ ಶಿವನು ತನ್ನ ಎರಡು ಕೈಗಳಲ್ಲಿ ತಂಬೂರಿಯನ್ನು, ಮತ್ತೆರಡು ಕೈಗಳಲ್ಲಿ ಡಮರು ಹಾಗೂ ತ್ರಿಶೂಲಗಳನ್ನು

ಹಿಡಿದಿರುವನು. [1] ನಂದಿಯ ಹಿಂದಿನ ಪಾದದ ಬಳಿಯಲ್ಲಿ ನವಿಲನ್ನೇರಿ ಕುಳಿತ ಕಾರ್ತಿಕೇಯನ ಶಿಲ್ಪವೂ ಕಂಡುಬರುತ್ತದೆ. ಈ ಕಲಾ ಶೈಲಿಯು ನಾಗನಾಥ ದೇವಾಲಯದ ಭುವನೇಶ್ವರಿಯ ಶಿಲ್ಪಗಳನ್ನು ಹೋಲುತ್ತವೆ. ಮತ್ತೊಂದು ಶಿಲ್ಪವು ಗರುಡವನ್ನೇರಿದ ಚತುರ್ಭುಜ ವಿಷ್ಣುವಿನದಾಗಿದೆ. ವಿಷ್ಣು ತನ್ನ ಕೈಯಲ್ಲಿ ಚಕ್ರ, ಗಧೆ, ಶಂಖ ಮತ್ತು ಪದ್ಮಗಳನ್ನಿಡಿದುಕೊಂಡಿರುವುದು ಕಾಣಸಿಗುತ್ತದೆ. [2] ನಗರದ ಭಕ್ತರು ದೇವಾಲಯಕ್ಕೆ ಆಧುನಿಕ ಸುಣ್ಣ ಬಣ್ಣಗಳನ್ನು ಬಳಿದಿರುವುದರಿಂದ ಅದರ ಮೂಲ ವೈಶಿಷ್ಟ್ಯಗಳು ಮಾಯವಾಗಿವೆ.

ಈ ದೇವಾಲಯದ ಮೇಲ್ಭಾಗದಲ್ಲಿ ಮತ್ತೊಂದು ಚಿಕ್ಕದಾದ ಗರ್ಭಗುಡಿಯು ಕಂಡುಬರುತ್ತದೆ. ಈ ಗರ್ಭಗುಡಿಗೆ ಹೋಗಲು ದೇವಾಲಯದ ಹಿಂಬದಿಯಲ್ಲಿ ಮೆಟ್ಟಿಲುಗಳ ವ್ಯವಸ್ಥೆ ಇದೆ. ದೇವಾಲಯದ ಆವರಣದ ಕಟ್ಟೆಯ ಮೇಲೆ ಪೂರ್ವದಲ್ಲಿ ಮತ್ತು ವಾಯವ್ಯ ಭಾಗದಲ್ಲಿ ಎರಡು ಲಿಂಗಗಳನ್ನು ಸ್ಥಾಪಿಸಲಾಗಿದೆ. ಕೆಲವರು ಮೂರು ಶಿವನ ಲಿಂಗಗಳು ಈ ದೇವಾಲಯದ ಭಾಗದಲ್ಲಿರುವುದರಿಂದ ಇದೊಂದು ತ್ರಿಕೂಟಾಚಲ ದೇವಾಲಯವಾಗಿದೆ ಎಂದು ಅಭಿಪ್ರಾಯ ಪಡುತ್ತಿದ್ದಾರೆ. ದೇವಾಲಯದ ಮಧ್ಯ ಮಂಟಪದ ಮುಚ್ಚಿಕೆಯಲ್ಲಿ ಸೇರಿಸಿರುವ ಕಲ್ಲಿನ ಮೇಲೆ ಕ್ರಿ.ಶ.1074ರಲ್ಲಿ ರಚಿಸಲಾದ ಕಲ್ಯಾಣದ ಚಕ್ರವರ್ತಿ 2ನೇ ಸೋಮೇಶ್ವರನ ಒಂದು ಶಾಸನವಿದೆ. ಇದರಲ್ಲಿ "ಸೂರಸ್ತಗಣ ಜೈನ ಪಂಡಿತನಾದ ಆರ್ಯನಂದಿ ಭಟಾರಕನ ಶಿಷ್ಯನಾಗಿದ್ದ ಆರ್ಯಪಂಡಿತನು ಪೊನ್ನಗುಂದ-30 ರ ಆಡಳಿತ ವಿಭಾಗದ ರಾಜಧಾನಿಯಾಗಿದ್ದ ಪೊನ್ನಗುಂದದಲ್ಲಿ ಅರಸರ ಬಸದಿಗೆ ನೀಡಿದ ಭೂದಾನವನ್ನು" ಕುರಿತು ಉಲ್ಲೇಖಿಸಲಾಗಿದೆ. ಅಲ್ಲದೇ ಮುಂದುವರೆದು ಈ ಶಾಸನದಲ್ಲಿ ಶ್ರೀಕರಣ ದೇವನಾಯಕ, ಪೆರ್ಗಡೆ ನಾಕಿಮಯ್ಯ, ಪೆರ್ಗಡೆ ರೇವಣಯ್ಯ, ಕರಣ ಆಚಪಯ್ಯನಾಯಕ, ಮಹಾಮಂಡಲೇಶ್ವರ ಲಕ್ಷ್ಮರಸ ಮುಂತಾದ ಅಧಿಕಾರಿಗಳ ಹೆಸರುಗಳನ್ನು ಸಹ ಉಲ್ಲೇಖಿಸಲಾಗಿದೆ. [3] ಆದರೆ ಈ ದೇವಾಲಯದ ನಿರ್ಮಾಣದ ಕುರಿತು ಡಾ. ಎಸ್. ಶೆಟ್ಟರ ಅವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ. ಇಲ್ಲಿರುವ ಕಲ್ಯಾಣ ಚಾಲುಕ್ಯರ ದೊರೆಯ ಕಾಲದಲ್ಲಿ ಹೊರಡಿಸಿದ ಶಾಸನಕ್ಕೂ ಈ ದೇವಾಲಯಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದಿದ್ದಾರೆ.

**ಅರಸಿಬೀದಿಯ ದೇವಾಲಯಗಳು**

ಕಲ್ಯಾಣದ ಚಾಲುಕ್ಯರ ಕಾಲದ ಮತ್ತೊಂದು ಕಲೆಯ ಕೇಂದ್ರ ಅರಸಿಬೀದಿ. ಚಾಲುಕ್ಯ ಚಕ್ರವರ್ತಿ ಜಯಸಿಂಹನ ಸಹೋದರಿಯಾದ ಅಕ್ಕಾದೇವಿಯು ಕಿಸುಕಾಡು-70ನ್ನು ಆಳುತ್ತಿರುವಾಗ ತನ್ನ ಮತ್ತೋರ್ವ ಸಹೋದರ ವಿಕ್ರಮಾದಿತ್ಯನ ಕೀರ್ತಿಯ ಸ್ಮಾರಕವಾಗಿ ಈ ನಗರವನ್ನು ನಿರ್ಮಿಸಿದಳು ಎಂಬ ವಿಷಯವನ್ನು ಚಾಲುಕ್ಯ ದೊರೆ 1ನೇ ಸೋಮೇಶ್ವರನ ಕ್ರಿ.ಶ. 1047 ರ ಶಾಸನವು ಅಕ್ಕಾದೇವಿಯು ಗೋಕಾಗೆಯ ಕೋಟೆಯ ನೆಲೆವೀಡಿನಲ್ಲಿದ್ದಾಗ ವಿಕ್ರಮಪುರದ ಗೊಣದ ಬೆಡಂಗಿ ಜಿನಾಲಯಕ್ಕೆ ದಾನ ನೀಡಿರುವುದನ್ನು ವಿವರಿಸುತ್ತದೆ. [4] ಅರಸಿಬೀದಿ ನಗರವು ಕಲ್ಯಾಣ ಚಾಲುಕ್ಯರ ಉಪರಾಜಧಾನಿಯೂ ಆಗಿತ್ತು. ಅರಸಿಯಾದ ಅಕ್ಕಾದೇವಿಯು ನಿರ್ಮಿಸಿದ್ದರಿಂದ ಇದನ್ನು ಅರಸಿಬೀದಿ ಎಂತಲೂ ಕರೆಯುತ್ತಿದ್ದರು. ಇದೊಂದು ಶಿಕ್ಷಣ ಕೇಂದ್ರವೂ ಹೌದು. ಇಲ್ಲಿ ಅಕ್ಕಾದೇವಿಯು ನಿರ್ಮಿಸಿದ ಎರಡು ಜೈನ ದೇವಾಲಯಗಳಿವೆ. ಒಂದು ಗೊಣದ ಬೆಡಂಗಿ ಜಿನಾಲಯ ಮತ್ತೊಂದು ಜೈನಗುಡಿ ಅಥವಾ ಸ್ಥಳಿಯರಿಂದ ಕರೆಯಲ್ಪಡುವ ಸೂಳೆಗುಡಿ.

### ಗೊಣದ ಬೆಡಂಗಿ ಜಿನಾಲಯ

ಗೊಣದಬೆಡಂಗಿ ಎಂಬ ಬಿರುದಾಂಕಿತಳಾಗಿದ್ದ, ಕಿಸುಕಾಡು-70 ರ ಆಡಳಿತಗಾರಳೂ ಆಗಿದ್ದ ಮತ್ತು ಜೈನ ಧರ್ಮದ ಅನುಯಾಯಿಯೂ ಆಗಿದ್ದ ಅಕ್ಕಾದೇವಿಯ ಕಾಲಾವಧಿಯಲ್ಲಿ ಈ ದೇವಾಲಯವು ನಿರ್ಮಾಣಗೊಂಡಿತ್ತು. ಆದುದರಿಂದ ಈ ದೇವಾಲಯಕ್ಕೆ ಗೊಣದ ಬೆಡಂಗಿ ಜಿನಾಲಯವೆಂದು ಕರೆಯುವರು. ಈ ದೇವಾಲಯವು ಚಾಲುಕ್ಯರ ಕಾಲದ ಒಂದು ತ್ರಿಕೂಟ ದೇವಾಲಯವಾಗಿದ್ದು; ಉತ್ತರಾಭಿಮುಖವಾದ ಜಿನಾಲಯವು ಮೂರು ಗರ್ಭಗೃಹ, ಒಂದು ಅಂತರಾಳ, ಎರಡು ಅರ್ಧಮಂಟಪ, ನವರಂಗ ಮಂಟಪಗಳನ್ನು ಒಳಗೊಂಡಿದೆ. ಪಶ್ಚಿಮದ ಕಡೆಯಲ್ಲಿ ಅಂತರಾಳದ ಪ್ರವೇಶ ದ್ವಾರದ ಪಕ್ಕಕ್ಕೆ ಎರಡು ಜಾಲಂದ್ರಗಳು, ಮುಂಭಾಗದಲ್ಲಿ ಆಕರ್ಷಕ ಸ್ತಂಭಗಳಿಂದ ಕೂಡಿದ ಮುಖಮಂಟಪವಿದೆ. ಈ ದೇವಾಲಯದ ಬಾಗಿಲು ಅಲಂಕಾರಿಕವಾದ ದ್ವಾರಶಾಖೆಗಳನ್ನು ಹೊಂದಿದ್ದು, ಲಲಾಟದಲ್ಲಿ ಧ್ಯಾನಭಂಗಿಯಲ್ಲಿ ಕುಳಿತಿರುವ ತೀರ್ಥಂಕರನ ಒಂದು ಶಿಲ್ಪವಿದೆ.

### ಜೈನಗುಡಿ/ಸೂಳೆಗುಡಿ

ಗೊಣದ ಬೆಡಂಗಿ ಜಿನಾಲಯದಿಂದ 100 ಮೀಟರ್‌ಗಳಷ್ಟು ಪಶ್ಚಿಮದ ಕಡೆಗೆ ಸಾಗಿದರೆ ಮತ್ತೊಂದು ಜೈನ ದೇವಾಲಯವು ಕಂಡು ಬರುವುದು. ಅದೂ ಸಹ ಚಾಲುಕ್ಯ ಶೈಲಿಯಲ್ಲಿಯೇ ಇದೆ. ಸ್ಥಳೀಯವಾಗಿ ಇದನ್ನು ಸೂಳೆಯರ ಗುಡಿ ಎಂದು ಕರೆಯುವರು. ಈ ಬಸದಿಯು ಎತ್ತರವಾದ ಗುಡ್ಡದ ಮೇಲೆ ನಿರ್ಮಿತವಾಗಿದ್ದು, ಇದು ನಕ್ಷತ್ರಾಕಾರದ ತಳವಿನ್ಯಾಸವನ್ನು ಹೊಂದಿದೆ. 45 ಅಡಿ ಉದ್ದ 32 ಅಡಿ ಅಗಲವಾದ ಈ ದೇವಾಲಯವು 3 ಅಡಿ ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿತವಾಗಿದೆ. ಈ ದೇವಾಲಯವು ಮುಖಮಂಟಪ, ನವರಂಗ, ಅಂತರಾಳ, ಗರ್ಭಗುಡಿ ಎಂಬ ನಾಲ್ಕು ಭಾಗಗಳಿಂದ ಕೂಡಿದೆ. ನವರಂಗ ಮಂಟಪದಲ್ಲಿ ಘಂಟಾ ಮಾದರಿಯ ಕಪ್ಪುಕಲ್ಲಿನ ಎಂಟು ಕಂಬಗಳು, ಅರ್ಧ ಮಂಟಪದಲ್ಲಿ ಚೌಕಾಕಾರದ ನಾಲ್ಕು ಕಂಬಗಳು ಇವೆ. ಮುಖ ಮಂಟಪದ ಸುತ್ತಲೂ ಕಕ್ಷಾಸನದ ವ್ಯವಸ್ಥೆಯಿದೆ. ಚಿಕ್ಕದಾದ ಮತ್ತು ಚೌಕಾಕಾರದ ಗರ್ಭಗುಡಿಯಿದೆ. ಆದರೆ ಯಾವುದೇ ದೇವತಾ ಮೂರ್ತಿಯು ಇರುವುದಿಲ್ಲ. ಒಳಭಾಗದಲ್ಲಿ ಪೀಠವಿದ್ದು, ಈ ಪೀಠದ ಮೇಲ್ಭಾಗದಲ್ಲಿ ಜಿನನ ಮೂರ್ತಿಯನ್ನು ಕೆತ್ತಲಾಗಿದೆ. ಈ ಜಿನಾಲಯವನ್ನು ಗುಣದ ಬೆಡಂಗೀರ್ ಎಂಬ ಬಿರುದನ್ನು ಹೊಂದಿದ್ದ ವಿಕ್ರಮಾದಿತ್ಯನ ಸಹೋದರಿ ಅಕ್ಕಾದೇವಿಯು ನಿರ್ಮಾಣ ಮಾಡಿರುವುದರಿಂದ ಇದಕ್ಕೆ ಗುಣದ ಬೆಡಂಗಿ ಜಿನಾಲಯವೆಂದು ಶಾಸನಗಳಲ್ಲಿ ಉಲ್ಲೇಖವಿದೆ. ಸ್ಥಳಿಯರ ಬಾಯಲ್ಲಿ ಅಪಭ್ರಂಶಗೊಂಡು ಗೊಣದ ಬೆಡಂಗಿ ಆದ ಈ ದೇವಾಲಯಕ್ಕೆ ಸಿಂಧ ಅರಸನು ಹೊಸ್ತಿಲವನವನ್ನು ದಾನ ಮಾಡಿದನು ಎಂದು ಕಲಚೂರಿಯ ಬಿಜ್ಜಳ ಅರಸನ ಕ್ರಿ.ಶ. 1167 ರಲ್ಲಿ ಹೊರಡಿಸಿದ ಶಾಸನವು ಉಲ್ಲೇಖಿಸಿದೆ. [7] ಅರಸಿಬೀದಿಯಲ್ಲಿ ಸುಂದರವಾದ ಜೈನಮಂದಿರಗಳನ್ನು ನಿರ್ಮಿಸಲಾಗಿದ್ದರೂ ಈಗ ಆ ಜೈನಮಂದಿರಗಳು ಸಂಪೂರ್ಣವಾಗಿ ವಿಕಾರಗೊಂಡು ಭಯವನ್ನುಂಟುಮಾಡುವ ಮಂದಿರವಾಗಿ ಕಂಡುಬರುವುದು ನೋವಿನ ಸಂಗತಿ. ನಿಧಿ ಪಡೆಯುವ ಆಸೆಯಿಂದ ಈ ದೇವಾಲಯಗಳ ಸೌಂದರ್ಯವನ್ನು ಹಾಳು ಮಾಡಲಾಗಿದೆ. ದೇವಾಲಯ ಪ್ರವೇಶಿಸಿದರೆ 5 ರಿಂದ 6 ಅಡಿ ಆಳದ ಕಂದಕ, ಆ ಕಂದಕಗಳಲ್ಲಿ ಒಣಗಿದ ಲಿಂಬೆಹಣ್ಣು, ಪ್ರಾಣಿ ಪಕ್ಷಿಗಳ ಸುಟ್ಟ ಎಲುವಿನ ತುಂಡುಗಳು, ಒಡೆದ ಮಡಿಕೆಯ ಚೂರುಗಳು ಅದರಲ್ಲಿ ಕುಂಕುಮ, ಮುಂತಾದ ವಸ್ತುಗಳು ಗೋಚರಿಸುತ್ತವೆ. ಗರ್ಭಗುಡಿಯನ್ನು ಪ್ರವೇಶಿಸಿದ ಕೂಡಲೇ ದುರ್ಗಂಧವೇ ಹೊರಸೂಸುತ್ತದೆ. ದೇವಾಲಯದ ಸುತ್ತಲೂ ಮುಳ್ಳು ಕಂಟಿಗಳಿಂದ ತುಂಬಿಕೊಂಡು ದೂರದಿಂದ ನೋಡಿದರೆ ಕಾಣದ ಸ್ಥಿತಿ ಬಂದೊದಗಿದೆ.

ಅಕ್ಕಾದೇವಿಯಿಂದ ನಿರ್ಮಿತವಾದ ಅರಸಿಬೀದಿಯು ಹಲವಾರು ರಾಜಮನೆತನಗಳ ಆಡಳಿತದ ಘಟಕವಾಗಿ ಕಂಡುಬಂದಿರುವುದು ಶಾಸನಗಳಿಂದ ತಿಳಿದುಬರುವುದು. ಕಲ್ಯಾಣ ಚಾಲುಕ್ಯರು, ಎರಂಬರ್ಗೆಯ ಸಿಂಧರು, ಕಲ್ಯಾಣದ ಕಳಚೂರಿ ದೊರೆಗಳಿAದ ಆಳಲ್ಪಟ್ಟ ಸ್ಥಳವಾಗಿದೆ. ಅರಸಿಬೀದಿಯಿಂದ ಎರಡು ಕಿ.ಮೀ ಅಂತರದಲ್ಲಿರುವ ಗೂಡೂರು ಗ್ರಾಮದಲ್ಲಿ ಮತ್ತೊಂದು ಕಲ್ಯಾಣ ಚಾಲುಕ್ಯರ ದೊರೆಯಾದ 2ನೇ ಜಯಸಿಂಹನ ಕಾಲದಲ್ಲಿ ನಿರ್ಮಿತಗೊಂಡ ಐತಿಹಾಸಿಕ ದೇವಾಲಯವಿದೆ. [9]

**ಕರಡಿ ಗ್ರಾಮದಲ್ಲಿರುವ ನಿರ್ಲಕ್ಷಿತ ಸ್ಮಾರಕಗಳು**

ಹುನಗುಂದ ತಾಲೂಕಾ ಕೇಂದ್ರದಿಂದ 25 ಕಿ.ಮೀ ದೂರ ಸಾಗಿದರೆ ಮತ್ತೊಂದು ಐತಿಹಾಸಿಕ ಸ್ಥಳ ಕಾಣಸಿಗುತ್ತದೆ. ಇಲ್ಲಿ ನಾಲ್ಕು ಶಾಸನಗಳು ಹಾಗೂ ಎರಡು ಮಂದಿರಗಳು ಕಾಣಸಿಗುತ್ತವೆ. ಶಾಸನಗಳು ಒಡೆದು ಹೋಗಿವೆ. ಗ್ರಾಮದ ಹನುಮಂತ ದೇವಾಲಯದ ಮುಂಭಾಗದಲ್ಲಿರುವ ಕಲ್ಲಿನ ಮೇಲೆ ವಿಜಯನಗರದ ಅರಸ ಸದಾಶಿವರಾಯನ ಕಾಲದಲ್ಲಿ ಅವನ ಪ್ರತಿನಿಧಿಯಾದ ರಾಮರಾಯನು ನಾವಿಂದರಾದ ತಿಮ್ಮೋಜ, ಭದ್ರೋಜ ಹಾಗೂ ಕೊಂಡೋಜರ ಬಿನ್ನಹದ ಮೇರೆಗೆ ತನಗೆ ಪುಣ್ಯವಾಗಬೇಕೆಂಬ ಉದ್ದೇಶದಿಂದ ಮುದುಗಲ್ಲು ಸೀಮೆಯ ಕರಡಾಯ ಸಮಿತಿಗೆ ಸೇರಿದ ನಾವಿಂದರ ಮೇಲೆ ಹಾಕಲಾದ ಸಮಸ್ತ ತೆರಿಗೆಯನ್ನು ತೆಗೆದು ಹಾಕಿದನೆಂದು ಹೇಳುತ್ತದೆ. [10] ಶಾಸನಗಳಲ್ಲಿ ಕರವಿಡಿ–30 ಎಂದೇ ಕರೆಯಲ್ಪಟ್ಟಿದೆ. ಈ ಪ್ರದೇಶದಲ್ಲಿ ಕಲ್ಯಾಣದ ಚಾಲುಕ್ಯರು, ಯಾದವರ, ವಿಜಯನಗರದ ಅರಸರು ಬಿಟ್ಟುಹೋಗಿರುವ ಶಾಸನಗಳು ಕರಡಿಯ ಸ್ಮಾರಕಗಳ ಮತ್ತು ಆ ಸ್ಥಳದ ಇತಿಹಾಸವನ್ನು ಪರಿಚಯಿಸುತ್ತವೆ. ಇಲ್ಲಿರುವ ಎರಡು ಐತಿಹಾಸಿಕ ದೇವಾಲಯಗಳನ್ನು ನೆಲಗುಡಿ ಮತ್ತು ಜೈನಗುಡಿ ಎಂದು ಸ್ಥಳೀಯವಾಗಿ ಕರೆಯುತ್ತಾರೆ.

**ನೆಲಗುಡಿ**

ಕರಡಿ ಗ್ರಾಮದ ಮಧ್ಯಭಾಗದಲ್ಲಿ ಕುಲಕರ್ಣಿಯವರ ಓಣಿಯಲ್ಲಿ ನಿರ್ಮಿತವಾಗಿರುವ ಪ್ರಾಚೀನ ದೇವಾಲಯವೇ ನೆಲಗುಡಿ. ಇದು ಶೈವ ದೇವಾಲಯವಾಗಿದ್ದು, ಇದು ನೆಲಗಟ್ಟಿಗಿಂತ ಕೆಳಮಟ್ಟದಲ್ಲಿ ನಿರ್ಮಿತವಾಗಿರುವುದರಿಂದ ಸ್ಥಳೀಯರು ಈ ದೇವಾಲಯಕ್ಕೆ ನೆಲಗುಡಿ ಎಂದು ಕರೆಯುತ್ತಾರೆ. ಮೇಲೆ ನಿಂತು ನೋಡಿದರೆ ಇದು ಬೌದ್ಧ ಚೈತ್ಯಾಲಯದ ಮಾದರಿಯಲ್ಲಿ ಕಾಣುತ್ತದೆ. ಈ ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ವಿಶಾಲವಾದ ನವರಂಗಮಂಟಪವನ್ನು ಹೊಂದಿದೆ. ಈ ನೆಲಗುಡಿಯು ಚಿಕ್ಕದಾದ ಗರ್ಭಗೃಹವನ್ನು ಹೊಂದಿದ್ದು, ಗರ್ಭಗುಡಿಯಲ್ಲಿ ಚಿಕ್ಕದಾದ ಒಂದು ಪೀಠವಿದ್ದು, ಆ ಪೀಠದ ಮೇಲೆ ಶಿವಲಿಂಗವಿದೆ. ಗರ್ಭಗುಡಿಯ ಎದುರಿಗೆ ನಂದಿಮಂಟಪವಿದೆ. ಗರ್ಭಗೃಹದ ದ್ವಾರಬಂಧದ ಲಲಾಟದಲ್ಲಿ ಗಜಲಕ್ಷ್ಮಿಯ ಮೂರ್ತಿಯಿದೆ. ನವರಂಗಮಂಟಪವು ವಿಶಾಲವಾಗಿದ್ದು, ಕಲ್ಯಾಣ ಚಾಲುಕ್ಯ ಶೈಲಿಯ 16 ಕಂಬಗಳು ಇರುತ್ತವೆ. ಮಧ್ಯಭಾಗದಲ್ಲಿರುವ ಸ್ತಂಭಗಳು ಚಿಕ್ಕ ಚಿಕ್ಕ ಶಿಲ್ಪಗಳಿಂದ ಅಲಂಕೃತವಾಗಿವೆ. ನವರಂಗದ ಒಂದು ಕಡೆಯಲ್ಲಿ ಗಣೇಶನ ಒಂದು ಮೂರ್ತಿ ಮತ್ತು ಎರಡು ವೀರಗಲ್ಲುಗಳು ಹಾಗೂ ನಾಗಶಿಲ್ಪಗಳು ಕಂಡುಬರುತ್ತವೆ. ಆದರೆ ಆ ವೀರಗಲ್ಲುಗಳು ಯಾವ ಅರಸು ಮನೆತನದ ಕಾಲದವುಗಳಾಗಿವೆ ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತಿಲ್ಲ.

**ಜೈನಗುಡಿ**

ಈ ಗ್ರಾಮದ ಕುರುಬರ ಓಣಿಯಲ್ಲಿ ಕಲ್ಯಾಣ ಚಾಲುಕ್ಯರ ಕಾಲಾವಧಿಯಲ್ಲಿಯೇ

ನಿರ್ಮಿತವಾಗಿದೆ ಎನ್ನಲಾದ ಜೈನ ದೇವಾಲಯವೊಂದು ಇದೆ. ಇದು ಸಹ ನೆಲಮಟ್ಟಕ್ಕಿಂತ ಕೆಳಭಾಗದಲ್ಲಿದೆ. ಆಯತಾಕಾರದಲ್ಲಿರುವ ಈ ಜೈನ ಮಂದಿರವು ನವರಂಗ, ಅರ್ಧಮಂಟಪ, ಹಾಗೂ ಗರ್ಭಗೃಹಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಮೂರ್ತಿರಹಿತವಾದ ಪಾಣಿಪೀಠವಿದ್ದು ಮೇಲ್ಭಾಗದ ಛಾವಣಿಯು ಕುಸಿದು ಹೋಗಿದೆ. ಗರ್ಭಗೃಹದ ದ್ವಾರಬಂಧದ ಲಲಾಟದಲ್ಲಿ ಜಿನಬಿಂಬವಿದೆ. ದೇವಾಲಯದ ನವರಂಗ ಮಂಟಪದಲ್ಲಿ ಚೌಕಾಕಾರದ ನಾಲ್ಕು ಕಂಬಗಳಿವೆ. ಜಿನಾಲಯದಲ್ಲಿರುವ ಅರ್ಧಮಂಟಪವು ಗೋಡೆಗಂಬಗಳನ್ನು ಒಳಗೊಂಡಿರುವುದನ್ನು ಸೇರಿಸಿ ಒಟ್ಟು ಎಂಟು ಕಂಬಗಳಿಂದ ಅಲಂಕಾರಗೊಂಡಿರುವ ಈ ಜಿನಾಲಯದ ಮೇಲ್ಛಾವಣಿಯು ಶಿಥಿಲಾವಸ್ಥೆಯಲ್ಲಿದೆ. ಇಂದು ಈ ದೇವಾಲಯವು ಸ್ಥಳೀಯರ ಕಟ್ಟಿಗೆ, ಕುರುಳು, ಬಟ್ಟೆ ಒಣಗಿಸಲು ಉಪಯೋಗಿಸುವ ವಸ್ತುವಾಗಿ ಪರಿಣಮಿಸಿದಂತೆ ತೋರುತ್ತದೆ.

**ನಂದವಾಡಗಿ ಗ್ರಾಮದಲ್ಲಿರುವ ಸ್ಮಾರಕಗಳು**

ಹುನಗುಂದ ತಾಲೂಕಿನ ಕಲ್ಯಾಣದ ಚಾಲುಕ್ಯರು ಮತ್ತು ರಾಷ್ಟ್ರಕೂಟರ ಕಾಲದ ಸ್ಮಾರಕಗಳಿರುವ ಕೇಂದ್ರವಾಗಿದೆ. ಸ್ಥಳೀಯವಾಗಿ ಈ ಗ್ರಾಮವನ್ನು ನಂದದೊರೆಯು ಆಳಿಹೋಗಿದ್ದರಿಂದ ಇದಕ್ಕೆ ನಂದವಾಡಗಿ ಎಂದು ಹೆಸರು ಬಂದಿದೆ ಎಂದು ಹೇಳುತ್ತಾರೆ. ಈ ಗ್ರಾಮದಲ್ಲಿ ನಾಗಲೇಶ್ವರ ಮಠ, ಸಂಗಮೇಶ್ವರ ದೇವಾಲಯ ಮತ್ತು ಮೂಕ ದೇವಾಲಯಗಳೆಂದು ಕರೆಯಲ್ಪಡುವ ಮೂರು ದೇವಾಲಯಗಳಿವೆ. ಪ್ರತಿಯೊಂದು ದೇವಾಲಯದಲ್ಲಿ ದೇವಾಲಯದ ಚರಿತ್ರೆಯನ್ನು ಕಟ್ಟಿಕೊಡುವ ಶಾಸನಗಳು ಕಂಡುಬರುತ್ತವೆ.

**ಸಂಗಮೇಶ್ವರ ದೇವಾಲಯ**

ನಂದವಾಡಿಗೆಯಲ್ಲಿರುವ ನಾಗಲಿಂಗೇಶ್ವರ ಮಠವು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡ ರೂಪದಲ್ಲಿದೆ. ಸಂಗಮೇಶ್ವರ ದೇವಾಲಯವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾದ ಕಟ್ಟಡವಾಗಿದೆ. ಈ ದೇವಾಲಯವು ಏಕಕೂಟ ದೇವಾಲಯವಾಗಿದ್ದು ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿತವಾಗಿದ್ದು; ಅಧಿಷ್ಠಾನವು ಉಪಾನ, ಜಗತಿ, ಗಳ ಮತ್ತು ಕಪೋತ ಭಾಗಗಳಿಂದ ಕೂಡಿದೆ. ಗರ್ಭಗುಡಿ, ಮುಖಮಂಟಪ, ಅಂತರಾಳ, ನಂದಿಮಂಟಪ ಮತ್ತು ನವರಂಗಮಂಟಪ ಮುಂತಾದ ಭಾಗಗಳನ್ನು ಒಳಗೊಂಡಿದೆ. ಈ ದೇವಾಲಯವು ಚೌಕಾಕಾರದ ಗರ್ಭಗುಡಿಯನ್ನು ಹೊಂದಿದ್ದು, ಒಳಗಡೆ ಎತ್ತರವಾದ ಪೀಠದ ಮೇಲೆ ಶಿವಲಿಂಗವಿದೆ. ಗರ್ಭಗುಡಿಯ ದ್ವಾರದಲ್ಲಿ ಅಲಂಕಾರಿಕ ವಜ್ರ, ಬಳ್ಳಿ, ಜಲ್ಲಿಸ್ತಂಭ, ಸಿಂಹಸಾಲು, ಪದ್ಮಶಾಖೆಗಳನ್ನು ಕಾಣಬಹುದಾಗಿದೆ. ಕಲ್ಯಾಣ ಚಾಲುಕ್ಯ ಶೈಲಿಯ ಚತುರ್ಶಾಖಾಲಂಕಾರವನ್ನು ಈ ದ್ವಾರಬಾಗಿಲು ಹೊಂದಿದೆ. ಗಜಲಕ್ಷ್ಮಿಯ ಬಿಂಬವಿದೆ. ಲಲಾಟದಲ್ಲಿ ದ್ರಾವಿಡಶೈಲಿಯಲ್ಲಿರುವ ವ್ಯಾಳಪಟ್ಟಿಕೆಗಳು, ಕೆಳಭಾಗದಲ್ಲಿ ಶೈವದ್ವಾರಪಾಲಕರು, ಚಾಮರಧಾರೆಯರ, ನದಿ ದೇವತೆಗಳ ಶಿಲ್ಪಗಳನ್ನು ಕೆತ್ತಲಾಗಿದೆ. ನವರಂಗಮಂಟಪವು ತೆರೆದ ಮಂಟಪವಾಗಿದ್ದು ಹದಿನಾರು ಸ್ತಂಭಗಳನ್ನು ಹೊಂದಿದ್ದು, ಮಧ್ಯಭಾಗದಲ್ಲಿರುವ ಸ್ತಂಭಗಳು ಪೀಠ, ಪಟ್ಟಿಕೆ, 16–8–16 ಮೂಲೆಕಾಂಡ, ವರ್ತುಲಾಕಾರ, ಬಳೆ, ಶಿಲಾಫಲಕ, ಸರಳಬೋದಿಗೆಗಳನ್ನು ಹೊಂದಿವೆ. ಚೌಕಾಕಾರದ ನೃತ್ಯಮಂಟಪವನ್ನು ಒಳಗೊಂಡಿದೆ. ಕಕ್ಷಾಸನಗಳು ಸಂಪೂರ್ಣವಾಗಿ ಶಿಥಿಲಗೊಂಡಿದೆ. ಎರಡು ಭಾಗಗಳಲ್ಲಿ ಮೆಟ್ಟಿಲುಗಳಿಗೆ ಯಾಳಿಶಿಲ್ಪಗಳನ್ನು ಜೋಡಿಸಲಾಗಿದೆ. ನವರಂಗದಲ್ಲಿ ಮೂರು ಪ್ರವೇಶದ್ವಾರಗಳು ಇವೆ. ಹೊರಗಿನ ಗೋಡೆಯು ಕೂಟ ಮಾದರಿಯದಾಗಿದೆ. ಮೇಲ್ಭಾಗದ ಮಂಜೂರು

ಕೀರ್ತಿಮುಖಗಳು, ಹೂ, ಹಂಸಶಿಲ್ಪಗಳಿಂದ ಅಲಂಕಾರಗೊಂಡಿದೆ. ಎಡಭಾಗದಲ್ಲಿರುವ ಪ್ರವೇಶದ ದ್ವಾರದ ಎದುರಿಗೆ ಹೊರಗಿನ ಪ್ರಾಕಾರದಲ್ಲಿ ಚೌಕಾಕಾರದ ಸ್ತಂಭದ ಮೇಲೆ ನಾಲ್ಕು ಕಡೆಗಳಲ್ಲೂ ಕಲ್ಯಾಣ ಚಾಲುಕ್ಯರ ದೊರೆ ತ್ರೆöÊಲೋಕ್ಯಮಲ್ಲದೇವನ ಕಾಲದ ಕ್ರಿ.ಶ.1044 ಮತ್ತು 1068ರ ಶಾಸನಗಳಲ್ಲಿ ಅವನ ರಾಣಿಯಾದ ಮೈಳಲದೇವಿಯ ವರ್ಣನೆಯನ್ನು ಹೊಂದಿದೆ. [11]

**ಕೆಲೂರಿನ ಸ್ಮಾರಕಗಳು**

ತಾಲೂಕಾ ಕೇಂದ್ರದಿಂದ 25 ಕಿ.ಮೀ ಅಂತರದಲ್ಲಿರುವ ಕೆಲೂರು ರಾಷ್ಟ್ರಕೂಟರ ಕಾಲದಿಂದ ಕಲ್ಯಾಣದ ಚಾಲುಕ್ಯ ದೊರೆಗಳ ಆಡಳಿತಕ್ಕೊಳಪಟ್ಟಿತ್ತೆಂಬುದು ತಿಳಿಯುತ್ತದೆ. ಗ್ರಾಮದ ಮೇಲ್ಭಾಗದ ಮೇಲೆ ಶಿಥಿಲಗೊಂಡಿರುವ ಕೋಟೆಯ ಗೋಡೆಗಳು ಮತ್ತು ಹುಡೆಗಳು ಕಾಣಸಿಗುತ್ತವೆ. ಅಲ್ಲದೇ ಗ್ರಾಮದ ದಕ್ಷಿಣ ದಿಕ್ಕಿನಲ್ಲಿ ಕೆರೆಯ ದಂಡೆಯ ಮೇಲೆ ಒಂದೇ ವೇದಿಕೆಯ ಮೇಲೆ ಒಂದಕ್ಕೊಂದು ಅಂಟಿಕೊಂಡಂತೆ ಐದು ಚಿಕ್ಕ ದೇವಾಲಯಗಳು ಕಂಡುಬರುತ್ತವೆ. ಇದನ್ನು ಸ್ಥಳೀಯರು ಪಂಚಲಿಂಗೇಶ್ವರ ದೇವಾಲಯವೆಂದು ಕರೆಯುತ್ತಾರೆ. ಆದರೆ ದೇವಾಲಯದ ಗೋಡೆಯ ಮೇಲಿರುವ ಶಿಲ್ಪಗಳನ್ನು ಅವಲೋಕಿಸಿದಾಗ ಇದೊಂದು ವೈಷ್ಣವ ದೇವಾಲಯವೆಂದು ತಿಳಿಯುತ್ತದೆ. ಒಂದು ದೇವಾಲಯಕ್ಕೂ ಮತ್ತೊಂದು ದೇವಾಲಯಕ್ಕೂ ಯಾವುದೇ ವ್ಯತ್ಯಾಸಗಳು ಕಾಣುವುದಿಲ್ಲ. ದೇವಾಲಯಗಳ ಗೋಡೆಗಳ ಮೇಲೆ ವಿಷ್ಣುವಿನ ಅವತಾರಗಳಾದ ವಾಮನ, ನರಸಿಂಹ, ವಿಷ್ಣು ಶಿಲ್ಪಗಳನ್ನು ಮತ್ತು ಶಿವನ ಅರ್ಧನಾರೀಶ್ವರ ಶಿಲ್ಪಗಳು ಗೋಚರಿಸುತ್ತವೆ. ಇಂದು ಸುಣ್ಣ-ಬಣ್ಣಗಳಿಂದ ತಮ್ಮ ಮೂಲರೂಪವನ್ನು ಕಳೆದುಕೊಂಡಿವೆ.

**ಕಂದಗಲ್ ಗ್ರಾಮದಲ್ಲಿರುವ ಸ್ಮಾರಕಗಳು**

ಹುನಗುಂದ ತಾಲೂಕಿನಲ್ಲಿರುವ ಐತಿಹಾಸಿಕ ಸ್ಥಳ ಕಂದಗಲ್. ಇಲ್ಲಿ ಚಾಲುಕ್ಯ ಶೈಲಿಯಲ್ಲಿರುವ ಮೂರು ದೇವಾಲಯಗಳು ಕಂಡು ಬರುತ್ತವೆ. ಆದರೆ ಇಂದು ಮೂರು ದೇವಾಲಯಗಳು ಆಧುನಿಕ ಮಾದರಿಯಲ್ಲಿ ಜೀರ್ಣೋದ್ಧಾರಗೊಂಡಿರುವುದರಿಂದ ಲಕ್ಷಣಗಳನ್ನು ಪರಿಚಯಿಸುವುದು ತುಂಬಾ ಕಷ್ಟ. ಈ ಗ್ರಾಮದಲ್ಲಿ ಒಟ್ಟು ಏಳು ಶಾಸನಗಳು ಲಭ್ಯವಾಗಿದ್ದು, ಅವುಗಳಲ್ಲಿ ಐದು ಶಾಸನಗಳನ್ನು ಗ್ರಾಮದ ಹನುಮಂತ ದೇವಾಲಯದ ಆವರಣದಲ್ಲಿ ಇಡಲಾಗಿದ್ದು ಜನರು ಅವುಗಳನ್ನು ದೇವರುಗಳೆಂದು ಭಾವಿಸಿ ಪ್ರತಿನಿತ್ಯ ಎಣ್ಣೆ, ಕುಂಕುಮ ಹಚ್ಚುವುದರ ಮೂಲಕ ಅವುಗಳಲ್ಲಿರುವ ಲಿಪಿ ಸ್ಪಷ್ಟವಾಗಿ ಕಾಣದಂತೆ ಇತಿಹಾಸವನ್ನು ಮರೆಮಾಚಿಸುವಂತಹ ಕೆಲಸವಾಗುತ್ತಿದೆ ಎಂಬುದು ಆತಂಕಕಾರಿಯಾದ ಸಂಗತಿ.

**ವೀರಭದ್ರ ದೇವಾಲಯ**

ಗ್ರಾಮದ ಮಧ್ಯದಲ್ಲಿರುವ ಮತ್ತು ಆರಾಧ್ಯ ದೇವನಿಗಾಗಿ ನಿರ್ಮಾಣವಾದ ದೇವಾಲಯವೇ ವೀರಭದ್ರ ದೇವಾಲಯ. ಈ ದೇವಾಲಯದ ಗೋಡೆಗೆ ಒರಗಿಸಿಟ್ಟಿರುವ ಚಾಲುಕ್ಯ ದೊರೆ ಜಗದೇಕಮಲ್ಲನ ಶಾಸನದಲ್ಲಿ ಚಾಲುಕ್ಯರ ಸಾಮಂತ ದೊರೆಯಾದ ಸೇವುಣವಂಶದ ಭುಜಬಲಭೀಮ, ಗೋಮದೇವರಸ, ಅವನ ಸರ್ವಾಧಿಕಾರಿಗಳಾದ ಹೆಗ್ಗಡೆ ಆಚಯಣ್ಣ, ಕಂದಗಲೆಯಣ್ಣ, ಕೇಸಿರಾಜರ ಹೆಸರುಗಳಿವೆ. [12] ಮಾಣಿಕೇಶ್ವರ ದೇವರಿಗೆ ಕಂದಗಾಲೆಯ ಪ್ರಭುಗಳಾದ ಆಚೆಯಣ್ಣ ಗೋಮದೇವರಸ ಮತ್ತು ಕೇಶಿರಾಜರು ಭೂದಾನವನ್ನು ನೀಡಿದ ಮಾಹಿತಿಯನ್ನು ದಾಖಲಿಸಲಾಗಿದೆ. ಅಂದಿನ ಮಾಣಿಕೇಶ್ವರ

ದೇವಾಲಯವೇ ಇಂದಿನ ವೀರಭದ್ರೇಶ್ವರ ದೇವಾಲಯವೆಂಬುದು ಸ್ಪಷ್ಟ.

**ಶಂಕರಲಿಂಗ ದೇವಾಲಯ**

ಇದೇ ಗ್ರಾಮದಲ್ಲಿರುವ ಚಾಲುಕ್ಯ ಶೈಲಿಯ ಮತ್ತೊಂದು ದೇವಾಲಯ ಶಂಕರಲಿಂಗ ದೇವಾಲಯ. ಈ ದೇವಾಲಯವು 12 ಕಂಬಗಳಿಂದ ಕೂಡಿದ ನವರಂಗ ಮಂಟಪವು ದೇವಾಲಯದ ಅಂದವನ್ನು ಹೆಚ್ಚಿಸಿದೆ. ಇದರಲ್ಲಿ ಆರು ಕಂಬಗಳು ಚೌಕಾಕಾರದಲ್ಲಿಯೂ ಮತ್ತೆ ಆರು ಕಂಬಗಳು ಗಂಟೆಯಾಕಾರದಲ್ಲಿವೆ. ಚಿಕ್ಕದಾದ ಗರ್ಭಗುಡಿಯಿದ್ದು ಅದರಲ್ಲಿ ಪೀಠದ ಮೇಲೆ ಶಿವನ ಪ್ರತಿರೂಪವಾದ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಗರ್ಭಗುಡಿಯ ಬಾಗಿಲುವಾಡದ ಮೇಲಿನ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಗರ್ಭಗುಡಿಯ ಪಕ್ಕದಲ್ಲಿ ಚಿಕ್ಕದಾದ ಕೋಷ್ಠಕಗಳನ್ನು ಕಾಣಬಹುದಾಗಿದೆ. ಆದರೆ ಇದರಲ್ಲಿ ಯಾವುದೇ ಮೂರ್ತಿಗಳಿರುವುದಿಲ್ಲ. ದೇವಾಲಯವು ಪೂರ್ವ ಮತ್ತು ಉತ್ತರಕ್ಕೆ ದ್ವಾರಗಳನ್ನು ಹೊಂದಿದೆ.

**ಈಶ್ವರ ದೇವಾಲಯ**

ಈ ದೇವಾಲಯವನ್ನು ಸ್ಥಳೀಯವಾಗಿ ಸೋಮಶೇಖರ ದೇವಾಲಯವೆಂತಲೂ ಕರೆಯುತ್ತಾರೆ. ಇದು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಚಿಕ್ಕದಾದ ಗರ್ಭಗುಡಿ, ನಂದಿಮಂಟಪ, ನವರಂಗ ಮುಂತಾದ ಭಾಗಗಳನ್ನು ಹೊಂದಿದೆ. ಭುವನೇಶ್ವರಿಯಲ್ಲಿ ಶಿವನ ಲೀಲೆಗಳನ್ನು ಬಿಂಬಿಸುವ ಶಿಲ್ಪಗಳನ್ನು ಕೆತ್ತಲಾಗಿದೆ. ನಂದಿ ಮಂಟಪದಲ್ಲಿ ನಾಲ್ಕು ಸ್ತಂಭಗಳು ಚರಕಿ ಯಂತ್ರದಲ್ಲಿ ತಿರುಗಿಸಿ ಮಾಡಿದ ಕಂಬಗಳಾಗಿವೆ. ಗರ್ಭಗುಡಿಯ ಬಾಗಿಲುವಾಡದ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಆದರೆ ಈ ದೇವಾಲಯವಿಂದು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಈ ಮೇಲಿನ ದೇವಾಲಯಗಳಲ್ಲದೇ ಹಿರೇಶಿಂಗನಗುತ್ತಿ ಗ್ರಾಮದಲ್ಲಿರುವ ಮಹಾದೇವ ದೇವಾಲಯ ಮತ್ತು ಗೌರಿಗುಡಿ, ಮರೋಳದಲ್ಲಿರುವ ಜೈನಬಸದಿ, ದನ್ನೂರಿನ ಧನ್ನೇಶ್ವರ ದೇವಾಲಯ, ಹೆರೂರಿನ ಅಮೃತೇಶ್ವರ ಮತ್ತು ಸೋಮೇಶ್ವರ ದೇವಾಲಯಗಳು ಐತಿಹಾಸಿಕ ಸ್ಮಾರಕಗಳಾಗಿವೆ.

**ಸಮಾರೋಪ**

ಹುನಗುಂದ ತಾಲೂಕಿನಲ್ಲಿರುವ ಶಿಲಾಯುಗದ ನೆಲೆಗಳು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಯಾದವ ಅರಸರು ನಿರ್ಮಿಸಿದ ದೇವಾಲಯಗಳು ವಿಶೇಷ ವೈಶಿಷ್ಟ್ಯಗಳಿಂದ ನಿರ್ಮಿತಗೊಂಡಿದ್ದರೂ ಪ್ರಸ್ತುತ ಈ ದೇವಾಲಯಗಳು ಮತ್ತು ಅವುಗಳ ಚರಿತ್ರೆಯನ್ನು ಸಾರಿ ಹೇಳುವ ಶಾಸನಗಳು ಸಂಪೂರ್ಣವಾಗಿ ನಿರ್ಲಕ್ಷಕ್ಕೊಳಪಟ್ಟು ನಿಧಿಗಳ್ಳರ ಆಶೆಯಿಂದ, ಹೆಂಡ ಸೇವಿಸುವವರ ವಿಶ್ರಾಂತಿ ಗ್ರಹಗಳಾಗಿ, ಜೂಜುಕೋರರ ಆಟಗಾರರ ಆಟದ ಕೇಂದ್ರಗಳಾಗಿ, ಕೃಷಿ ಉಪಕರಣಗಳನ್ನಿಡುವ ಸ್ಥಳಗಳಾಗಿ, ಮಹಿಳೆಯರ ಕಟ್ಟಿಗೆ ಹಾಕುವ, ಬಟ್ಟೆ ಒಣಗಿಸುವ ಕೇಂದ್ರಗಳಾಗಿವೆ. ಈ ಹಿನ್ನೆಲೆಯಲ್ಲಿ ನಾಡಿನ ಯುವಕರು, ಸಾರ್ವಜನಿಕರು ಸರಕಾರದೊಂದಿಗೆ ಕೈಜೋಡಿಸಿ ಇಂತಹ ಸಾವಿರಾರು ಶಾಸನಗಳನ್ನು, ದೇವಾಲಯಗಳನ್ನು, ಬಸದಿಗಳನ್ನು ರಕ್ಷಿಸುವುದರೆ ಮಾತ್ರ ಮುಂದಿನ ಪೀಳಿಗೆಯವರಿಗೆ ಇತಿಹಾಸವನ್ನು ಪರಿಚಯಿಸಲು ಸಾಧ್ಯ.

**ಪರಾಮರ್ಶನ ಗ್ರಂಥಗಳು:**


1. ಅಪರ್ಣಾ ಕೂ. ಸ., (1996) ದೇವಾಲಯ ವಾಸ್ತುಶಿಲ್ಪ ಪರಿಚಯ. ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಎಂ. ವಿ. ಕೃಷ್ಣರಾವ್., ಕರ್ನಾಟಕ ಇತಿಹಾಸ ದರ್ಶನ ಕರ್ನಾಟಕ ಸಹಕಾರಿ, ಪ್ರಕಾಶನ, ಬೆಂಗಳೂರು.
3. ಎಚ್.ಎಸ್. ಗೋಪಾಲರಾವ್., ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು. ಒಂದು ಅಧ್ಯಯನ. ನವಕರ್ನಾಟಕ ಪಬ್ಲಿಕೇಷನ್ಸ್ ಬೆಂಗಳೂರ., (1993) .
4. ಗೋಪಾಲ ಬಾ. ರಾ., ಕಲ್ಯಾಣದ ಚಾಲುಕ್ಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
5. ಗೋಪಾಲ ಬಾ. ರಾ., ಕರ್ನಾಟಕದ ಕಲೆಗಳು ಸಂ–4 ಕನ್ನಡ ಸಾಹಿತ್ಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ಪತ್ತಾರ ಶಿಲಾಕಾಂತ., (2000), ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪ್ರಾಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
7. ಚಿಂಚೋಳಿ ಸುಭಾಸ., (1999) ಪ್ರಾಕ್ತನಶಾಸ್ತ್ರದ ಹಿನ್ನಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತು ಮತ್ತು ಶಿಲ್ಪಕಲೆಯ ಅಧ್ಯಯನ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
8. ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪದ ನೆಲೆ ಹಿನ್ನೆಲೆ ಬೆಂಗಳೂರ ವಿಶ್ವವಿದ್ಯಾಲಯ, ಬೆಂಗಳೂರ.
9. ಸಿಂಧಗಿ ರಾಜಶೇಖರ., (1982), ಕರ್ನಾಟಕದ ವಾಸ್ತುಶಿಲ್ಪ, ಮತ್ತು ಚಿತ್ರಕಲೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
10. ಮುನಿಸ್ವಾಮಿ ಆರ್., (1999) (ಸಂ) ಕರ್ನಾಟಕ ರಾಜ್ಯ ಗಾಸೆಟಿಯರ್ ವಿಜಾಪುರ ಜಿಲ್ಲೆ, ಅಭಿಮಾನಿ ಪ್ರಕಾಶನ, ಬೆಂಗಳೂರು.
11. ಕನ್ನಡ ವಿಶ್ವವಿದ್ಯಾಲಯ, ಹಂಪಿ ಶಾಸನ ಸಂಪುಟ, 9.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.